# ಆಹಾ ಸುದ್ದಿ!

★ ಸಸಿತೋಟ



ಆಸ್ಟ್ರಿಯಾದ ಈ ಉದ್ಯಮಿ ಆ್ಯಂಡ್ರೇಸ್‌ನ ವ್ಯಾಪಾರಿ ತಲೆ ರೂಪಿಸಿರುವ ಹೊಟೇಲ್ ಕೊಠಡಿಯಿದು. ಅಲ್ಲಿಯ ಸಾರ್ವಜನಿಕ ಉದ್ಯಾನವನದಲ್ಲಿ ಕಾಂಕ್ರೀಟ್ ಪೈಪ್‌ಗಳಿಂದ ಕೊಠಡಿ ನಿರ್ಮಿಸಿ 'ಡಾಸ್‌ಪಾರ್ಕ್ ಹೊಟೇಲ್' ಎಂದು ಹೆಸರಿಸಿದ್ದಾನೆ. ಆನ್‌ಲೈನ್‌ನಲ್ಲಿ ಬುಕ್ ಮಾಡಬಹುದಂತೆ. ಶುಲ್ಕ ಗ್ರಾಹಕರು ಕೊಟ್ಟಷ್ಟು. ಪಾರ್ಕ್‌ನಲ್ಲಿ ಕಳ್ಳಪ್ರೇಮಿಗಳನ್ನು ಗುರಿಯಾಗಿಟ್ಟುಕೊಂಡೇ ಉದ್ಯಮ ಶುರು ಮಾಡಿದ ಹಾಗಿದೆ.

ಅರಿಝೋನಾದ ನಾಯಿಯೊಂದು ಸ್ವಲ್ಪದರಲ್ಲೇ ಮರಣ ದಂಡನೆ ತಪ್ಪಿಸಿಕೊಂಡು ಜೀವಾವಧಿ ಶಿಕ್ಷೆ ಅನುಭವಿಸುತ್ತಿದೆ. ಮನೆಯ ಮಾಲೀಕನ ನಾಲ್ಕು ವರ್ಷದ ಮಗುವಿನ ಮೇಲೆ ದಾಳಿ ಮಾಡಿ ಕಣ್ಣುಗುಡ್ಡೆ ಹಾಗೂ ಗಲ್ಲವನ್ನು ಹರಿದು ಹಾಕಿದ್ದಕ್ಕೆ ಮರಣ ದಂಡನೆ ವಿಧಿಸಬೇಕೆಂದು ಮಾಲೀಕರ ಪರ ವಕೀಲರು ವಾದಿಸಿದ್ದರಂತೆ. ಆದರೆ ನ್ಯಾಯಾಧೀಶರು ಇದು ಮಾಲೀಕರ ನಿರ್ಲಕ್ಷ್ಯದಿಂದ ಆಗಿದ್ದು ಎಂದು ತೀರ್ಪು ಕೊಟ್ಟು ಜೀವಾವಧಿ ಶಿಕ್ಷೆ ವಿಧಿಸಿದರಂತೆ. ಈಗ ನಾಯಿ ಸಂತಾನಶಕ್ತಿ ಹರಣಕ್ಕೆ ಒಳಗಾಗಿದ್ದು, ಅರಿಝೋನಾದ ಮಹಿಳಾ ಕೈದಿಗಳಿರುವ ಜೈಲಿನಲ್ಲಿ ಸೆರೆವಾಸ ಅನುಭವಿಸುತ್ತಿದೆಯಂತೆ.



ಬ್ರೆಜಿಲ್‌ನ ಸಾವೊಪೋಲೋದ ಈ ಒಸಾಮಾ ಬಿನ್ ಲಾಡೆನ್ ಹೇಗಿದ್ದಾನೆ? ಸಾವಿಗೀಡಾದ ಉಗ್ರವಾದಿಯಂತೆ ಕಾಣುವ ಫ್ರಾನ್ಸಿಸ್ ಬಾರ್ ತೆರೆದು ಲಾಭ ಮಾಡಿಕೊಳ್ಳಲು ಯತ್ನಿಸುತ್ತಿದ್ದಾನಂತೆ. ಹಣ ಮಾಡಲು ಒಳ್ಳೆಯವರನ್ನೇ ಆದರ್ಶವಾಗಿಟ್ಟುಕೊಳ್ಳಬೇಕಾಗಿಲ್ಲ ಅಲ್ಲವೇ!

ಚೀನಾದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ ಹಾಂಗ್ ಯಾವೊಮಿಂಗ್ ಪ್ರತಿಜ್ಞೆಯನ್ನು ಮಾಡಿದ್ದ. ಮಕ್ಕಳು ಶಾಲಾ ಆವರಣದಲ್ಲಿ ಕಸ ಚೆಲ್ಲುವುದನ್ನು ನಿಲ್ಲಿಸಿದರೆ ಹಂದಿಯ ಮೂತಿಗೆ ಮುತ್ತಿಡುವುದಾಗಿ ಹೇಳಿದ್ದ. ಕಳೆದ ಒಂದು ವರ್ಷದಲ್ಲಿ ಮಕ್ಕಳು ಕಸ ಚೆಲ್ಲುವುದನ್ನು ನಿಲ್ಲಿಸಿದಾಗ ಹಾಂಗ್ ಪ್ರತಿಜ್ಞೆ ಪೂರೈಸಿದನಂತೆ. ನಮ್ಮಲ್ಲಿ ನಡೆದ ಈ ಚುನಾವಣೆಯಲ್ಲಿ ಕೆಲವು ರಾಜಕಾರಣಿಗಳು ಏನೇನೋ ಪ್ರತಿಜ್ಞೆ ಮಾಡಿದ್ದಾರಲ್ಲಾ, ಪೂರೈಸುತ್ತಾರೋ, ಇಲ್ಲ ಹೊಸ ಶಪಥ ಮಾಡುತ್ತಾರೋ ನೋಡಲು ಯಾವುದಕ್ಕೂ ಫಲಿತಾಂಶ ಬರಲಿ.

ಗಾಜಾ ಪಟ್ಟಿ ಸಮೀಪ ಇರುವ ಇಸ್ರೇಲಿನ ಡೆರಾಟ್ ಪಟ್ಟಣದಲ್ಲಿ ಕಟ್ಟಿರುವ ಬಾಂಬ್‌ನಿಂದ ರಕ್ಷಣೆ ಪಡೆಯುವ ಶೆಲ್ಟರ್ ಇದು. ರಾಕೆಟ್ ಹಾರಿಬರುತ್ತಿರುವಾಗ ಅಲಾರ್ಮ್ ಹೊಡೆದುಕೊಂಡ ತಕ್ಷಣ ಅಲ್ಲಿಯ ನಾಗರಿಕರು ಇದರೊಳಗೆ ಓಡಿ ರಕ್ಷಣೆ ಪಡೆಯುತ್ತಾರಂತೆ. ಪಟ್ಟಣದ ವಾಸ್ತುಶಿಲ್ಪ ಹಾಗೂ ನಾಗರಿಕರ ಅದರಲ್ಲೂ ಮಕ್ಕಳ ಮನಃಸ್ಥಿತಿ ಗಮನದಲ್ಲಿಟ್ಟುಕೊಂಡು ಇಂತಹ ಡಿಸೈನರ್ ಬಾಂಬ್ ಶೆಲ್ಟರ್ ನಿರ್ಮಿಸಿದ್ದಾರಂತೆ. ಅನಿವಾರ್ಯತೆಯಲ್ಲೂ ಅಲಂಕಾರಕ್ಕೆ ಗಮನ ಕೊಡುವಾಗ ಮನಸ್ಸು ಗಟ್ಟಿ ಇರಲೇಬೇಕು.



ಫ್ಲಾರಿಡಾದ ಪಾರ್ಕ್ ಒಂದರಲ್ಲಿ ಅಳಿಲೊಂದಿಗೆ ಸೆಲ್ಫಿ (ಅಂದರೆ ಕ್ಯಾಮೆರಾ ಮೊಬೈಲ್‌ನಿಂದ ತನ್ನ ಫೋಟೊ ತಾನೇ ತೆಗೆಯುವುದು) ತೆಗೆಯಲು ಹೋದ ಬ್ರಿಯಾನ್‌ಗೆ ಆ ಅಳಿಲು ಒಳ್ಳೆಯ ಪಾಠವನ್ನೇ ಕಲಿಸಿರಬಹುದು. ಬೆನ್ನಿಗೇರಿ ಕಿರುಕುಳ ನೀಡತೊಡಗಿದ ಅಳಿಲಿಂದ ಬಚಾವಾಗಲು ಬ್ರಿಯಾನ್ ನೆಲದ ಮೇಲೆ ಹೊರಳಾಡಬೇಕಾಯ್ತಂತೆ. ಫೇಸ್‌ಬುಕ್‌ನಲ್ಲಿ ಹಾಕಿಕೊಳ್ಳಲು ಈ ಫೋಟೊ ಎಂದು ಮೊದಲೇ ಅನುಮತಿ ಪಡೆದಿದ್ದರೆ ಅಳಿಲು ಒಳ್ಳೆಯ ಪೋಸ್ ನೀಡುತ್ತಿತ್ತೋ ಏನೋ!



